RA 13/2025
PW1

ದಿನಾಂಕ 20-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ರವರಿಂದಃ

ಮೇಲ್ಮನವಿ ಸಲ್ಲಿಸಲು ಮಾಹಿತಿಯನ್ನು ಕೊಡಲು ವಕೀಲರ ಕಚೇರಿಗೆ ನಾನು ಮತ್ತು ಉಳಿದ ಮೇಲ್ಮನವಿದಾರರು ಹೋಗಿದ್ದೆವು. ನನ್ನ ತಾಯಿಗೆ 82 ವರ್ಷ ವಯಸ್ಸಾಗಿದ್ದು, ವಯೋ ಸಹಜ ಕಾಯಿಲೆಗಳಿಂದ ಬಳಸುತ್ತಿದ್ದಾರೆ. ಮೂರನೇ ಮೇಲ್ಮನವಿದಾರರಿಗೆ ಆರೋಗ್ಯ ಸರಿ ಇರುವುದಿಲ್ಲ. ಅದರ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಮೂರನೇ ಮೇಲ್ಮನವಿದಾರರು ಖಾಯಂ ಆಗಿ ಚಿಕಿತ್ಸೆಯಲ್ಲಿದ್ದಾರೆ.

ನಮ್ಮ ಮನೆಯಲ್ಲಿ ನಾಲ್ಕು ಜನ ವಾಸ ಇದ್ದೇವೆ. ನನ್ನ ಇಬ್ಬರು ಅಕ್ಕಂದಿರು ಮುಂಬೈನಲ್ಲಿದ್ದಾರೆ. ನಾನು ಮತ್ತು ನನ್ನ ತಂಗಿ ಊರಿನಲ್ಲಿ ವಾಸ ಇದ್ದೇವೆ. ಎದುರುದಾರರು-6 ರಿಂದ 8 ಊರಿನಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. ಅವರು ಮುಂಬೈನಲ್ಲಿ ವಾಸ ಇದ್ದಾರೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು-1 ರಿಂದ 5, 9 ರಿಂದ 11, 16 ರಿಂದ 24 ರವರಿಗೆ ತೊಂದರೆ ಕೊಡಲು ತಡವಾಗಿ ಯಾವುದೇ ಕಾರಣ ಇಲ್ಲದೆ ಸುಳ್ಳು ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಕಾರಣ ಇಲ್ಲದೇ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ (ಸಂಚಾರಿ ನ್ಯಾಯಾಲಯ, ಕಾರ್ಕಳ)